ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿಯು ಪಶ್ಚಿಮ ಕಾರ್ಡ್ ರಸ್ತೆಯ ೧ ಮತ್ತು ೩ನೇ ಹಂತಕ್ಕೆ ಸಾನೆಗುರುವನಹಳ್ಳಿ, ಕೇತಮಾರನಹಳ್ಳಿ ಮತ್ತು ಶಿವನಹಳ್ಳಿ ಗ್ರಾಮದ, ಈ ಕೆಳಗೆ ನಮೂದಿಸಿದ ಭೂಮಿಗಳನ್ನು ಭೂಸ್ವಾಧೀನ ಮಾಡಲು ಅಧಿಸೂಚನೆ ೯-೭-೧೯೮೮ರಲ್ಲಿ ಮತ್ತು ೫-೧೧-೧೧ರಲ್ಲಿ ಹೊರಡಿಸಿತು.

ಹಂತ	ಗ್ರಾಮ	ಸರ್ವೆ ನಂ.
೧ನೇ ಹಂತ	ಕೇತಮಾರನಹಳ್ಳಿ	೧೨೮, ೧೨೯, ೧೪೧, ೧೫೨, ೧೫೩, ೧೭೭, ೧೭೬ ಮತ್ತು ೧೫೧.
	ಶಿವನಹಳ್ಳಿ	೨, ೪, ೯, ೧೦, ೧೧ ೧೨, ೧೩, ೧೪, ೧೫, ೧೬ ೧೭, ೧೮, ೧೯, ೨೦, ೨೧, ೨೩, ೨೪, ೨೪, ೨೫ ೨೬, ೨೭, ೨೮, ೨೯, ೩೦, ೩೧, ೩೩, ೩೩, ೩೪
	ಸಾನೆಗುರುವನಹಳ್ಳಿ	೧೧೦, ೧೧೧, ೧ ೨, ೧೧೩, ೧೧೫, ೧೧೬, ೧೧೭ ಮತ್ತು ೧೧೮.
೩ನೇ ಹಂತ	ಶಿವನಹಳ್ಳಿ ಸಾನೆಗುರುವನಹಳ್ಳಿ	೬, ೭ ಮತ್ತು ೮ ೪, ೫ ಮತ್ತು ೧೧೯.

ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿಯು ರೆವಿನ್ಯೂ ನಿವೇಶನದಾರರ ಕೋರಿಕೆಯನ್ನು ಪರಿಗಣಿಸಿ, ಪಶ್ಚಿಮ ಕಾರ್ಡ್ ರಸ್ತೆಯ ಮೊದಲನೇ ಹಂತ ಮತ್ತು ೩ನೇ ಹಂತದಲ್ಲಿ ಕ್ರಮವಾಗಿ ೨೬೮ ನಿವೇಶನಗಳನ್ನು ಮತ್ತು ೧೩೭೪ ನಿವೇಶನಗಳನ್ನು ರಚಿಸಿತು. ಹಾಗೂ ಮಂಜ್ರಿರಸ್ತೆಗಳಿಗೆ ತೊಂದರೆಯಾಗದಂತೆ ಪರ್ಯಾಯ ರಸ್ತೆಗಳಿಗೆ ಸೂಕ್ತವಾದ ಬದಲಾವಣೆಗಳನ್ನು ಮಾಡಿ ಒಡಾವಣೆ ಶುಲ್ಕವನ್ನು ವಸೂಲು ಮಾಡುವ ಮೂಲಕ ಪರಾಮರ್ಶೆಯನ್ನು ದಿನಾಂಕ ೨೬-೨-೨೪ರ ಸಭೆಯ ವಿಷಯ ಸಂಖ್ಯೆ ೪೧೩೯ರಲ್ಲಿ ಹಾಗೂ ದಿನಾಂಕ ೨೫ ೩-೭೫ರ ಸಭೆಯ ವಿಷಯ ಸಂಖ್ಯೆ ೪೩೨೨ರ ಮಂಜೂರಾತಿ ನಿರ್ಣಯಿಸಿತು. ಆದರ ಪ್ರಕಾರ ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಮಂಡಳಿ ತದನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮೊದಲನೇ ಹಂತದ ೯೬೦ ನಿವೇಶನದಾರರಿಂದಲೂ ಮತ್ತು ೩ನೇ ಹಂತದ ೨೬೯ ನಿವೇಶನದಾರರಿಂದಲೂ ಬಡಾವಣೆ ಶುಲ್ಕವನ್ನು ವಸೂಲು ಮಾಡಿ, ಮೊದಲನೇ ಹಂತದಲ್ಲಿ ೬೨೪ ನಿವೇಶನದಾರರಿಗೂ ಹಾಗೂ ೩ನೇ ಹಂತದಲ್ಲಿ ೨೪೯ ನಿವೇಶನದಾರರಿಗೂ ಸ್ವಾಧೀನ ಪತ್ರವನ್ನು ನೀಡಿದೆ.

ಈ ಕ್ರಮವು ಜಾರಿಯಲ್ಲಿರುವಾಗ ಕರ್ನಾಟಕ ಉಚ್ಚ ನ್ಯಾಯಾಲಯವು ೧೯೮೫-೮೬ರಲ್ಲಿ ಹಲವಾರು ತೀರ್ಪುಗಳ ಮೂಲಕ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಂಡ ಭೂಮಿಯನ್ನು ರೀಕನ್ವೆ: ಮಾಡು ಹಂಚಿಕೆಗಳನ್ನು ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧಿಕಾರವಿಲ್ಲವೆಂದು ಮತ್ತು ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಂಡ ಭೂಮಿಯನ್ನು ಯೋಜನೆಗಾಗಿ ಉಪಯೋಗಿಸತಕ್ಕದೆಂದು ನೀಡಿದ ತೀರ್ಮಾನಗಳಿಗೆ ಅನುಗುಣವಾಗಿ, ಸರ್ಕಾರವು ದಿನಾಂಕ ೮-೫-೮೬ರಿಂದ ರೀಕನ್ವೆ ಮಾಡುವುದನ್ನು ನಿಲ್ಲಿಸಿದೆ ಆದುದರಿಂದ ರೆವಿನ್ಯೂ ನಿವೇಶನದಾರರಿಗೆ ರೀಕನ್ವೆ ಮಾಡಿ ಸ್ವಾಧೀನ ಪತ್ರಗಳನ್ನು ನೀಡಲು ಸಾಧ್ಯವಿಲ್ಲ.

೧೪) ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಮಾರಾಟ ತೆರಿಗೆ ಇಲಾಖೆಯ ಅಧಿಕಾರಿಗಳು ಕೆಂದಾಯ ಇಲಾಖೆಯ ಅಧಿಕಾರಿಗಳಿಂದ ಸರ್ಟಿಫಿಕೇಟ್ ತಂದು ತೋರಿಸು ಎಂತೆ ಒತ್ತಾಯಿಸಿ ಕಿರುಕುಳ ಕೊಡುತ್ತಿರುವುದು.

ಶ್ರೀ ವಿನಯ ಕುಮಾರ್ ಸೊರಕೆ(ಪುತ್ತೂರು).-ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವ್ಯವಸಾಯೋತ್ಪನ್ನ ಬೆಳೆಗಾರರು ಈವರೆಗೆ ತಾವು ಬೆಳೆಯುತ್ತಿದ್ದ ಬೆಳೆಗಳನ್ನು ಒಳ್ಳೆಯ ಬೆಲೆ ದೊರಕುವ ಕಡೆಗಳಿಗೆ ತೆಗೆದುಕೊಂಡು ಹೋಗಿ ಓನರ್‌ಶಿಪ್ ಡಿಕ್ಲರೇಷನ್ ಸರ್ಟಿಫಿಕೇಟನ್ನು ತ್ರಿಪ್ರತಿಯಲ್ಲಿ ಮಾಲು ತೆಗೆದುಕೊಳ್ಳುವವರ ಮೇಲು ರಾಜುವಿನೊಡನೆ ಸಂಬಂಧಪಟ್ಟ ಚಿಕ್‌ಪೋಸ್ಟ್‌ಗಳಲ್ಲಿ

ಕೊಡುತ್ತಿದ್ದರು. ಇತ್ತೀಚೆಗೆ ಮಾರಾಟ ತೆರಿಗೆ ಇಲಾಖೆಯವರು ಇದನ್ನು ಮಾರ್ಪಡಿಸಿ ಜಮೀನಿನ ಮಾಲೀಕರಿಗೆ ಎಷ್ಟು ಜಮೀನಿದೆ ಮತ್ತು ಎಷ್ಟು ಬೆಳೆ ಬೆಳೆದಿದ್ದಾರೆ ಎಂಬ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳಿಂದ ಸರ್ಟಿಫಿಕೇಟ್ ತೆಗೆದುಕೊಂಡು ಸಂಬಂಧಪಟ್ಟ ಚೆಕ್‌ಪೋಸ್ಟ್‌ಗಳಲ್ಲಿ ತೋರಿಸಬೇಕೆಂದು ಒತ್ತಾಯ ಮಾಡುತ್ತಿರುವುದರಿಂದಾಗಿ ಪ್ರತಿಯೊಂದು ಮಾರಾಟದ ಸಂದರ್ಭದಲ್ಲಿ ವಿಲೇಜ್ ಅಕೌಂಟೆಂಟ್ ರಿಂದ ಹಿಡಿದು ಕಂದಾಯ ಇಲಾಖೆಯ ಅಧಿಕಾರಿಗಳನ್ನು ನೋಡಿ ಸರ್ಟಿಫಿಕೇಟ್ ಪಡೆಯುವಲ್ಲಿ ತುಂಬಾ ತೊಂದರೆ ಪಡುತ್ತಿದ್ದು, ಅವರ ಬೆಳೆಗಳನ್ನು ಮಾರಾಟ ಮಾಡುವಲ್ಲಿ ವಿಳಂಬವಾಗುತ್ತಿರುವುದಲ್ಲದೆ ತೊಂದರೆಗೂ ಒಳಗಾಗಿದ್ದಾರೆ. ಆದ್ದರಿಂದ ಈ ವಿಧಾನವನ್ನು ಸರಳಗೊಳಿಸಿ ಅಥವಾ ಹಿಂದೆ ಇದ್ದಂತಹ ವಿಧಾನವನ್ನೇ ಉಳಿಸಿಕೊಂಡು ಬಡ ಬೇಸಾಯಗಾರರ ತೊಂದರೆಯನ್ನು ತಪ್ಪಿಸಬೇಕೆಂದು ಸರಕಾರವನ್ನು ಒತ್ತಾಯಿಸಿ, ಈ ಬಗ್ಗೆ ಸಂಬಂಧಪಟ್ಟ ಸಚಿವರು ಹೇಳಿಕೆ ನೀಡಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ಹೇಳಿಕೆ ಈರೀತಿ ಇದೆ.

೧. ಕಳ್ಳವ್ಯಾಪಾರಗಳಿಂದ ಮಾರಾಟ ತೆರಿಗೆ ಕದಿಯುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ೧೯೫೭ರ ಉಪಬಂಧಗಳ ಪ್ರಕಾರ ರಾಜ್ಯದ ಸೂಕ್ತ ಸ್ಥಳಗಳಲ್ಲಿ ಶೋಧನಾ ಠಾಣೆಗಳನ್ನು (ಸೇಲ್ಸ್ ಟ್ಯಾಕ್ಸ್ ಚೆಕ್‌ಪೋಸ್ಟ್) ನಿರ್ಮಿಸಲಾಗಿದೆ.

೨. ಮಾರಾಟ ತೆರಿಗೆ ಕಾನೂನಿನ ಪ್ರಕಾರ ಸರಕು ಸಾರಿಗೆ ವಾಹನಗಳಲ್ಲಿ ಒಯ್ಯಲಾಗುತ್ತಿರುವ ಸರಕುಗಳಿಗೆ ಸಂಬಂಧಪಟ್ಟಂತೆ ವಿಕ್ರಿ ಬಿಲ್ಲು (ಸೇಲ್ಸ್ ಬಿಲ್ಲು) ಗಳೀ ಅಥವಾ ಇಲಾಖೆಯಿಂದ ಪಡೆದ ನಮೂನೆ-೩೫ರ ಡೆಲಿವರಿ ನೋಟ್ (ಫಾರ್ಮ್ ೩೫ ಡೆಲಿವರಿ ನೋಟ್) ಇರಬೇಕು ಹಾಗೂ ಇಂತಹ ಬಿಲ್ ಅಥವಾ ಡೆಲಿವರಿ ನೋಟಿನ ಒಂದು ಪ್ರತಿಯನ್ನು ಶೋಧನಾ ಠಾಣೆಯಲ್ಲಿ ಸಲ್ಲಿಸ ಬೇಕು ಎಂಬ ಕಾನೂನು ಇದೆ. ಈ ನಿಬಂಧನೆಯನ್ನು ಪಾಲಿಸದಿದ್ದರೆ ಶೋಧನಾ ಠಾಣೆಯ ಅಧಿಕಾರಿ ದಂಡ ವಿಧಿಸ ಬಹುದು. ಒಂದು ಸಮಯ ಸರಕನ್ನು ಸಾಗಿಸುವವರು ವರ್ತಕರಲ್ಲದ ಪಕ್ಷದಲ್ಲಿ, ಅಂತಹವರನ್ನು ದಂಡಿಸಬಾರದೆಂಬ ಕ್ರಮವಿದೆ.

೩. ಸ್ವಂತ ಬೇಸಾಯದಿಂದ ಬೆಳೆದ ಬೆಳೆಯನ್ನು ಸಾಗಿಸುವ ರೈತರು ಮಾರಾಟ ತೆರಿಗೆಯ ''ವರ್ತಕರು'' (ಡೀಲರ್) ಎಂಬ ವ್ಯಾಖ್ಯೆಯಲ್ಲಿ ಬರುವುದಿಲ್ಲ. ಆದ್ದರಿಂದ ರೈತರು ತಾವು ಬೆಳೆದ ಮಾಲನ್ನು ಸಾಗಿಸುವಾಗ, ಅದು ಹಾಗೆಂದು ತೋರಿಸಲು ಆಯಾ ಊರಿನ ಗ್ರಾಮ ಲೆಕ್ಕಿಗರ ಪ್ರಮಾಣ ಪತ್ರ ತೋರಿಸುವ ವಾಡಿಕೆ ಇದೆ ಈ ಕ್ರಮವನ್ನು ಪಾಲಿಸಿದಾಗ ಠಾಣೆಯಲ್ಲಿರುವ ಮಾಲು ರೈತರದೆಂದು ಖಾತ್ರಿಯಾಗಿ ಶೋಧನಾಠಾಣೆಯ ಅಧಿಕಾರಿ ಅಂತಹ ಸರಕು ಸಾರಿಗೆ ವಾಹನವನ್ನು ನಿರಾತಂಕವಾಗಿ ಹೋಗಲು ಬಿಡುತ್ತಾರೆ.

೪. ಆದರೆ ಅನೇಕ ಕಳ್ಳ ವರ್ತಕರು ತಾವೇ ರೈತರ ಬಾಗಿಲಿಗೆ ಹೋಗಿ ಅವರ ಮಾಲನ್ನು ಖರೀದಿಸಿ ಸ್ವಂತವಾಗಿ ಸಾಗಿಸುತ್ತಿದ್ದರೂ ತೆರಿಗೆ ತೆರುವುದನ್ನು ತಪ್ಪಿಸಲು ರೈತರ ಮಾಲೆಂಬ ಸಬೂಬು ಹೇಳಿ ಪಾರಾಗಲು ಪ್ರಯತ್ನಿಸಿದ ಅನೇಕ ಪ್ರಸಂಗಗಳು ವಾಣಿಜ್ಯ ತೆರಿಗೆ ಇಲಾಖೆಯ ಗಮನಕ್ಕೆ ಬಂದಿದೆ. ಉದಾಹರಣೆ: ಬ್ಯಾಡಗಿ ಪ್ರದೇಶದಿಂದ ಮುಂಬಯಿಗೆ ಹಣ ಮೆಣಸಿನಕಾಯಿ, ಬಳ್ಳಾರಿ ಜಿಲ್ಲೆಯಿಂದ ಆಂಧ್ರಕ್ಕೆ ಹತ್ತಿ, ಮೈಸೂರು ಜಿಲ್ಲೆಯ ಕೆಲವು ತಾಲ್ಲೂಕುಗಳಿಂದ ತಮಿಳು ನಾಡಿಗೆ ಹತ್ತಿ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಿಂದ ಮಹಾರಾಷ್ಟ್ರಕ್ಕೆ ಕಬ್ಬು ಬೀದರ್ ಪ್ರದೇಶದಿಂದ ಮಹಾರಾಷ್ಟ್ರಕ್ಕೆ ದ್ವಿದಳ ಧಾನ್ಯಗಳು ಇತ್ಯಾದಿ.

೫. ಆದ್ದರಿಂದ ಶೋಧನಾ ಠಾಣೆಯಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಒಕ್ಕಲುತನ ಹುಟ್ಟು ವಳಿಯ ಸರಕಿನ ಸಾಗಾಣಿಕೆ ಕಂಡು ಬಂದಲ್ಲಿ ಅದು ರೈತರದೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ಬಹಳ ಎಚ್ಚರಿಕೆಯಿಂದ ವಿಚಾರಿಸುತ್ತಾರೆ ಮತ್ತು ಆ ಬಗ್ಗೆ ನಿಖರವಾದ ಪ್ರಮಾಣ ಹಾಗೂ ದಾಖಲೆಯನ್ನು ನೋಡುತ್ತಾರೆ ಇದರ ಎನಾ ಮಾರಾಟಕರ ಶೋಧನಾ ಠಾಣೆಗಳಿಗೂ ಹಾಗೂ ರೈತರಿಗೂ ಯಾವುದೇ ಸಂಬಂಧ ಬೀಳುವುದಿಲ್ಲ. ಕೆಲವು ಸಲ ಅನ್ಯಮಾಣಿಕ ವರ್ತಕರು ಇಂತಹ ಜಾಗರೂಕ ವಿಚಾರಣೆಯನ್ನು ಕಡಿಸಲು ರೈತರ ಹೆಸರು ಹೇಳಿ ಏನಾ ಕಾರಣ ಗಲಾಟೆ ಮಾಡಿದ್ದುಂಟು.